**ಪಿ.ಡಬ್ಲು : 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 14-01-2026**

ನಾನು ಪಿರ್ಯಾದಿ ಸಂಸ್ಥೆಯ ಮ್ಯಾನೇಜರ್ ಆಗಿದ್ದು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಸಲ್ಲಿಸಿದ್ದು ಪ್ರಮಾಣ ಪತ್ರದಲ್ಲಿನ ವಿಷಯ ಸತ್ಯವಾಗಿದ್ದು ಅದನ್ನು ನಾನೇ ಹೇಳಿ ಬರೆಸಿದ್ದು ಅದರಲ್ಲಿನ ಸಹಿ ನನ್ನದೇ ಆಗಿರುತ್ತದೆ.

**ಮುಂದುವರಿದ ಮುಖ್ಯ ವಿಚಾರಣೆಃ ಪಿರ್ಯಾದಿ ಪರ ಶ್ರೀ ಆರ್ ಐ ಎನ್ ವಕೀಲರಿಂದ**

ಈ ಪ್ರಕರಣದಲ್ಲಿ ನಾನು ಪಿರ್ಯಾದಿದಾರ ಸಂಸ್ಥೆ ನೀಡಿದ ಅಧಿಕಾರದ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪಿರ್ಯಾದಿ ಸಂಸ್ಥೆ ನನಗೆ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ನೀಡಿದ ಅಧಿಕಾರ ಪತ್ರದ ಠರಾವಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಆರೋಪಿ ನೀಡಿದ ಒಂದು ಮೂಲ ಚೆಕ್, ಬ್ಯಾಂಕಿನವರು ನೀಡಿದ ಒಂದು ಮೆಮೋವನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ವಕೀಲರ ಮುಖಾಂತರ ನೀಡಿದ ನೋಟಿಸಿನ ಪ್ರತಿ ಮತ್ತು ಅಂಚೆ ರಶೀದಿ, ಅಂಚೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-4 ರಿಂದ 6 ಎಂದು ಗುರುತಿಸಲಾಯಿತು. ಅದೇ ರೀತಿ ಸಾಲ ಕೇಳಿ ಸಲ್ಲಿಸಿದ ಅರ್ಜಿ, ಸಾಲ ಮಂಜೂರಾತಿ ಪತ್ರ, ಸಾಲದ ಕರಾರು ಪತ್ರ, ಡಿಮಾಂಡ್ ಪ್ರಾಮಿಸರಿ ನೋಟ್, ಷರತ್ತು ಪತ್ರ, ಭದ್ರತಾ ಪತ್ರ ಮತ್ತು ಸಾಲದ ವಿವರ ಹೊಂದಿದ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-7 ರಿಂದ 13 ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕಾಗಿ ವಿನಂತಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಎಮ್ ಎಮ್ ವಕೀಲರಿಂದ**

(ಈ ಹಂತದಲ್ಲಿ ಆರೋಪಿ ಪರ ಶ್ರೀ ಜಿ ಎಮ್ ಎಮ್ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು**

**ಜೆ.ಎಂ.ಎಫ್.ಸಿ., ನ್ಯಾಯಾಲಯ ಭಟ್ಕಳ**